ಶ್ರೀ ಎನ್. ರಾಚಯ್ಯ.— ಈಗ ರಾಜ್ಯದವರ ಧನ ಸಹಾಯದ ಮೇರೆಗೆ 66 ಕೋಳಿಗಳು ಎಂದರೆ 66 ಮತ್ತೆ 13 ಕೇಂದ್ರಗಳು ಇವೆರಡನ್ನು ಮಲ್ಟಿಪ್ಲೈ ಮಾಡಬೇಕಾಗುತ್ತದೆ. ಹಾಗೆ ಕೇಂದ್ರದವರ ವಿಶೇಷ ಧನಸಹಾಯ ಮೇರೆಗೆ 100 ಕೋಳಿಗಳು ಎಂದರೆ 100 ಮತ್ತೆ 12 ಕೇಂದ್ರಗಳು ಇವೆರಡನ್ನು ಮಲ್ಟಿಪ್ಲೈ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಪ್ರತಿಯೊಂದಕ್ಕೂ ಬಿದ್ದಂತ ಖರ್ಚನ್ನು ತಿಳಿಸುತ್ತೀರಾ ?

ಶ್ರೀ ಎನ್. ರಾಚಯ್ಯ. — ಅದು ವರದಿ ಪ್ರಕಾರ ನನ್ನ ಹತ್ತಿರ ಬಂದಿಲ್ಲ. ಅಲ್ಲಿದೇ ಇದು ನಾವು ನೇರವಾಗಿ ನಡೆಸಕ್ಕದ್ದಲ್ಲ. ತಾವು ತಾಲ್ಲೂಕ್ ಮಂಡಲಿಯ ಅಧ್ಯಕ್ಷರಾಗಿದ್ದೀರಾ ಇದು ತಾಲ್ಲೂಕ್ ಮಂಡಲಿಯವರು ನಡೆಸತಕ್ಕ ಕೆಲಸ, ತಾವು ಇದರ ಬಗ್ಗೆ ಬೇರೆ ನೋಟೀಸ್ ಕೊಟ್ಟರೆ ಉತ್ತರ ಒದಗಿಸುತ್ತೇನೆ.

ಶ್ರೀ ಎಂ. ವಿ. ರಾಮಸ್ವಾಮಿ : ಈ ಅಪ್ಲೈಡ್ ನ್ಯೂಟ್ರಿಷನ್ ಪ್ರೋಗ್ರಾಂನಲ್ಲಿ ತಾವು ಕೋಳಿ ಒದಗಿಸುತ್ತೀರಿ, ಹಾಗೆ ಈ ಅಧಿಕಾರಿಗಳು ಇನಸ್ಪೆಕ್ಷನ್ ಹೋದಾಗ ಅಲ್ಲಿ ಕೋಳಿ ಕಶ್ಯರಿಸುತ್ತಾರೆ ಎಂದು ತಿಳಿದು ಬಂದಿದೆ ಇದಕ್ಕೆ ತಮ್ಮ ಉತ್ತರ ಏನು ?

ಶ್ರೀ ಎನ್. ರಾಚಯ್ಯ.— ಸರ್ಕಾರಕ್ಕೆ ಅದರ ಬಗ್ಗೆ ವರದಿ ಬಂದಿಲ್ಲ, ಆ ರೀತಿ ಬಂದರೆ ಅದು ಸಮ್ಮನೇ ಬಿಡತಕ್ಕ ವಿಚಾರವಲ್ಲ

ಶ್ರೀ ಕೋಣಂದೂರು ಲಿಂಗಪ್ಪ:—ಒಂದು ಕೋಳಿಗೆ ಎಷ್ಟು ಬೆಲೆ ಎಂಬುದನ್ನು ಮಾನ್ಯಮಂತ್ರಿಗಳು ತಿಳಿಸುವರೆ ?

ಶ್ರೀ ಎನ್. ರಾಚಯ್ಯ:—ಕೋಳಿ ಸಾಕಣೆ ಕೇಂದ್ರಕ್ಕೆ ಹೋದರೆ, ಅಲ್ಲಿ ಒಂದು ಕೋಳಿಗೆ ಇಷ್ಟು ಬೆಲೆ ಎಂದು ನಿಗದಿ ಮಾಡಿರುತ್ತಾರೆ; ಅಲ್ಲಿ ಇದನ್ನು ತಿಳಿದುಕೊಳ್ಳಬಹುದು.

## Shopping Centre around Subhashanagar

563. SRI T. R. SHAMANNA (Fort) —Will the Minister of State for Fisheries and Horticulture be pleased to state :—

whether there is any proposal to construct shopping centre round about Subashnagar to avoid unauthorised use of land by footpath traders and others and also to make it a remunerative enterprise to the Government ?

SRI K. T. RATHOD (Minister of State for Fisheries and Horticulture).—

A proposal to develop Subashnagar Grounds into an Industial and Cultural Complex is under the active consideration of Government.

SRI. T. R. SHAMANNA —May I ask the Government to give me a categorical assurance whether the proposed industrial and cultural complex will be under the control of the Government or whether it will be a remunerative enterprise of the ruling party?

† SRI K. T. RATHOD — The apprehension of the hon. Member that it is going to be a place for the advantage of the ruling party is not correct. I have already made it very clear both in the Assembly and in the council when this matter was raised by way of a calling attention motion that Government is very keen to bring out an industrial *cum*-cultural complex in Subhasnagar grounds.

SRI T. R. SHAMANNA —Is the Government aware that this area is a very important area situated near the City Railway Station and the Central Bus Stand and therefore will it not be advisable to have an alround shopping centre and provide rooms at the top for the convenience of the incoming visitors from outside so that it may be helpful to the travellers and at the same time yield good revenue to the Government ?

SRI K T RATHOD.—Government is aware that this is an important place and we have to develop it in order to enhance the beauty of the city. The anxiety of the hon Member will be kept in view and Government will take all precautions to see that nothing incovenient to the public takes place while developing it.

ಶ್ರೀ ಕಾಗೋಡು ತಿಮ್ಮಪ್ಪ — ಸುಭಾಷ್ ನಗರದ ಮೈದಾನವನ್ನು ಕೈಗಾರಿಕೆ ಮತ್ತು ಸಾಂಸ್ಕೃತಿಕ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದ ಸಲಹೆಯು ಸರ್ಕಾರದವರ ಸಕ್ರಿಯ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಇದನ್ನು ಸರ್ಕಾರದವರೇ ನೇರವಾಗಿ ಮಾಡಬೇಕೆಂದು ಪರಿಶೀಲನೆ ಮಾಡುತ್ತಿದ್ದಾರೋ ಅಥವಾ ಖಾಸಗಿಯವರು ಮತ್ತು ಇತರ ಸಂಸ್ಥೆಗಳವರು ಸಲಹೆ ಕೊಟ್ಟು, ಅದನ್ನು ಅವರಿಗೇ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೋ ಎನ್ನುವುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ ?

ಶ್ರೀ ಕೆ. ಟಿ. ರಾಠೋಡ್:— ಇದಕ್ಕೆ ಸಂಬಂಧಪಟ್ಟಹಾಗೆ ಒಂದು ಸಮಿತಿಯನ್ನು ರಚಿಸಿದ್ದೇವೆ. ಈ ವಿಚಾರ ಸಮಿತಿಯ ಕಳೆದ ಸಭೆಯಲ್ಲಿ ಬಂದಿತ್ತು. ಈ ಪ್ರದೇಶವನ್ನು ಯಾವ ರೀತಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯ ಎಂದು ನಾವು ತಾಂತ್ರಿಕ ಸಮಿತಿಯವರನ್ನು ಕೇಳಿದೆವು ಅವರು, ಒಂದು ಅಥಾರಿಟಿ ಮಾಡಿ ಅಥವಾ ಇಂಡಿವಿಜುಯಲ್‌ಗೆ ಕೊಟ್ಟು ಅಭಿವೃದ್ಧಿ ಮಾಡಬಹುದೆಂದೂ ಸಲಹೆ ಕೊಟ್ಟಿದ್ದಾರೆ. ಇದನ್ನೆಲ್ಲಾ ಸರ್ಕಾರ ಗಮನಕ್ಕೆ ತೆಗೆದುಕೊಂಡು, ಆಮೇಲೆ ಒಂದು ನಿರ್ಣಯಕ್ಕೆ ಬರುತ್ತದೆ.

ಶ್ರೀ ಕೊಣಂದೂರು ಲಿಂಗಪ್ಪ:— ಮಾನ್ಯ ಮಂತ್ರಿಗಳು ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದ್ದಾರೆ. ಹಾಗಿದ್ದರೆ, ಆ ಸಮಿತಿಯಲ್ಲಿ ಯಾರು ಯಾರು ಸದಸ್ಯರಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುವರೆ ? ಮತ್ತು ಮಾನ್ಯ ಮಂತ್ರಿಗಳು ಪ್ರಥಮದಲ್ಲಿ ಉತ್ತರ ಕೊಡುತ್ತಾ, ಸರ್ಕಾರದವರು, ಆಡಳಿತ ಪಕ್ಷಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾಡಿಲ್ಲ ಎಂದು ಹೇಳಿದ್ದಾರೆ. ಆದರೆ, ಇವತ್ತಿಗೂ ಕೂಡ ಸುಭಾಷ್ ನಗರದ ಮೈದಾನದ ಅಷ್ಟು ಜಾಗವೂ ಆಡಳಿತ ಪಕ್ಷದ ವಸ್ತು ಪ್ರದರ್ಶನಕ್ಕೆ ಮೀಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಟಿ. ರಾಠೋಡ್:— ಅಲ್ಲಿ ವಸ್ತುಪ್ರದರ್ಶನ ನಡೆಯುತ್ತಿರುವುದು, ಇವತ್ತಿನ ಆಡಳಿತ ಪಕ್ಷ ಮಾಡಿದ ವ್ಯವಸ್ಥೆಯಲ್ಲ. ಇದು ಮೊದಲನಿಂದಲೂ ಬಂದ ವ್ಯವಸ್ಥೆ. ಇನ್ನು ಇದಕ್ಕೆ ಸಂಬಂಧಪಟ್ಟ ಸಮಿತಿಯಲ್ಲಿ ಯಾರು ಯಾರು ಇದ್ದಾರೆ ಎಂದರೆ

The Minister of Fisheries and Horticulture is the Chairman and the other members are as follows:

1. Commissioner and Secretary to Government, Home Department.
2. Administrator, Corporation, City of Bangalore
3. Vice-Chairman, Karnataka State Road Transport Corporation, Bangalore
4. Secretary to Government, Agriculture & Animal Husbandry.

5. Chief Architect, Bangalore
6. Director of Town planning and
7. Director of Horticulture, Bangalore.

SRI T. R. SHAMANNA.— We are happy that there is a good committee but I only hope that the same thing which has happened on Mahathma Gandhi Road should not be repeated here also. How is that a land which belongs to the Horticultural Department for the development of horticulture is given to the Congress Office for a complete year and that too the whole compound is encircled with zinc sheet for a complete year?

SRI K. T. RATHOD.— As the Hon'ble Member knows, this is an open space and we have not developed it into horticultural land.

ಶ್ರೀ ಕೊಣಂದೂರು ಲಿಂಗಪ್ಪ.—ಸರ್ಕಾರದವರು ಅಭಿವೃದ್ಧಿ ಮಾಡಬೇಕೆಂದಿರುವ ಪ್ರದೇಶದಲ್ಲಿ ನಾವು ಬೇಲಿ ಕಟ್ಟಿಕೊಳ್ಳುವುದಕ್ಕೆ ಅನುಮತಿ ಕೊಡುವರೆ?

ಶ್ರೀ ಕೆ. ಟಿ. ರಾಥೋಡ್.— ಸರ್ಕಾರದವರು ಅನುಮತಿ ಕೊಟ್ಟರೆ, ಹಾಕಿಕೊಳ್ಳಬಹುದು.

ಶ್ರೀ ಕೊಣಂದೂರು ಲಿಂಗಪ್ಪ.—ಹಾಗಾದರೆ, ವರ್ಷಪೂರ್ತಿ ಬೇಲಿ ಹಾಕಿಕೊಳ್ಳುವುದಕ್ಕೆ ಕಾಂಗ್ರೆಸ್ಸಿನವರಿಗೆ ಅಪ್ಪಣೆಯನ್ನು ಸರ್ಕಾರದವರು ಕೊಟ್ಟಿದ್ದಾರೆಯೇ?

ಶ್ರೀ ಕೆ. ಟಿ. ರಾಥೋಡ್.—ವರ್ಷ ಪೂರ್ತಿ ಕೊಟ್ಟಿಲ್ಲ: ಅವರು ಕೇಳುತ್ತಿದ್ದಾರೆ; ನಾವು ಕೊಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ವಸ್ತು ಪ್ರದರ್ಶನ ನಡೆಯುವ ಕಾಲದಲ್ಲಿ ಜಿಂಕ್‌ಶೀಟನ್ನು ನೈದಾನದ ಸುತ್ತಲೂ ಹಾಕಲಾತ್ತಾರೆ ಆದರೆ, ವಸ್ತುಪ್ರದರ್ಶನ ಮುಗಿದ ಮೇಲೆ ಕೂಡ ಜಿಂಕ್ ಶೀಟ್ ಬೇಲಿಯು ಹಾಗೆ ಇರುತ್ತದೆ. ಯಾಗಾದರೆ, ಸರ್ಕಾರದವರು ಸದಾ ಕಾಲ ಜಿಂಕ್ ಶೀಟ್ ಹಾಕಿಕೊಳ್ಳುವುದಕ್ಕೆ ಅಪ್ಪಣೆ ಕೊಟ್ಟಿದ್ದಾರೆಯೇ?

ಶ್ರೀ ಕೆ. ಟಿ. ರಾಥೋಡ್.—ಅವರು ಅನುಮತಿ ಕೇಳಿದ್ದರು. ಅದನ್ನು ಸರ್ಕಾರ ವಿಚಾರ ಮಾಡಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ವಸ್ತು ಪ್ರದರ್ಶನದ ಅವಧಿ ಮುಗಿದ ಮೇಲೂ, ಸುತ್ತಲೂ ಇರುವ ಬೇಲಿಯನ್ನು ಹಾಗೆಯೇ ಬಂದೋಬಸ್ತು ಮಾಡಿ ಇಟ್ಟುಕೊಂಡಿದ್ದಾರೆ, ಇದಕ್ಕೆ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆಯೇ ಹೇಗೆ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಕೆ. ಟಿ. ರಾಥೋಡ್,—ಅದನ್ನು ಇಡಬೇಕೇ ಎಂಬುದರ ಬಗ್ಗೆ ಪರಿಶೀಲನೆ ಮಾಡುತ್ತಿದೆ ನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ — ಅಲ್ಲಿ ಬೇಲಿ ಹಾಕಿಕೊಳ್ಳುವುದಕ್ಕೆ ಅಪ್ಪಣೆ ಕೊಡುವಾಗ ಒಂದು ನಿರ್ದಿಷ್ಟ ಕಾಲಕ್ಕೆ ಕೊಡುತ್ತೀರೆಯೇ ಅಥವಾ ಇಡೀ ವರ್ಷಕ್ಕೆ ಕೊಡುತ್ತಾರೆಯೇ ಎನ್ನುವುದು ಮೂಲ ಭೂತ ಪ್ರಶ್ನೆ.

ಶ್ರೀ ಕೆ. ಟಿ. ರಾಥೋಡ್.— ನಿರ್ದಿಷ್ಟ ಅವಧಿಗೆ ಮಾತ್ರ ಕೊಡುತ್ತೇವೆ. ಆದರೆ, ಬೇಲಿ ಹಾಗೆ ಬಿಡುವ ಬಗ್ಗೆಯಂತೂ ಹೇಳುವುದಾದರೆ. ಕಾಂಗ್ರೆಸ್ ಪಕ್ಷದವರು, ನಾವು ಪುನ: ವಸ್ತು ಪ್ರದರ್ಶನ ಪ್ರಾರಂಭ ಮಾಡುವುದು ಇದೆ; ಆಗ ಪುನ: ಬೇಲಿ ಹಾಕಿಸಲಿಕ್ಕೆ ಹೋದರ ಹೆಚ್ಚು ಖರ್ಚು ಬೀಳುತ್ತದೆ, ಆದುದರಿಂದ, ಅದು ಹಾಗೆಯೆ ಉಳಿಯುವುದಕ್ಕೆ ಅಪ್ಪಣೆ ಕೊಡಬೇಕೆಂದು ಕೇಳಿದ್ದಾರೆ, ಅದನ್ನು ಪರಿಶೀಲನೆ ಮಾಡಿ, ಅವರು ಪುನ: ವಸ್ತು ಪ್ರದರ್ಶನ ಮಾಡುವ ಸಂದರ್ಭ ಬಂದಿದ್ದರಿಂದ, ಅವರಿಗೆ ಅಪ್ಪಣೆ ಕೊಡಲಾಗಿದೆ,

ಶ್ರೀ ಕೋಣಂದೂರು ಲಿಂಗಪ್ಪ.— ನಮ್ಮ ಪಕ್ಷದವರು, ಕಬ್ಬನ್ ಪಾರ್ಕ್ ಮಂತ್ರಿ ಲಾಲ್‌ಬಾಗಿನಲ್ಲಿ ವಸ್ತು ಪ್ರದರ್ಶನ ಮಾಡುವವರಿದ್ದಾರೆ. ಆದುದರಿಂದ, ಅಲ್ಲಿ ಬೇಲಿ ಹಾಕಿಕೊಳ್ಳುವುದಕ್ಕೆ ಸರ್ಕಾರದವರು ಅಪ್ಪಣೆ ಕೊಡುವರೆ?

ಶ್ರೀ ಕೆ. ಟಿ. ರಾಥೋಡ್,—ಅದನ್ನು ವಿಚಾರ ಮಾಡುತ್ತೇವೆ

## Creation of Lady Medical Officer's Post at Shahabad Town

516. SMT. VIJAYA DESAI (Chittapur).— Will the Minister for Health be pleased to state: —

(*a*) whether number of representations have been made for creating a Lady Medical Officer's post at Shahabad Town;

(*b*) if so, whether the Government intend creating the said post?

SRI SUBHASH ASTURE (Minister of State for Major and Medium Irrigation [on behalf of SRI H. SIDDAVEERAPPA (Minister for Health)],—

(*a*) No. representations have been received in the recent past,

(*b*) The question will be examined.

SMT. VIJAYA DESAI.—Is it not a fact that in the year 1972 during his visit to Shahabad Town the Health Minister personally received written representations from the people of Shahabad as well as local M·L As?

† SRI SUBHASH ASTHURE.—We have said that we have not received any representation in the recent past; in the year 1972 a representation was made to him.

SMT. VIJAYA DESAI.—In view of the fact that Shahabad is an industrial place with a population of 30,000, will the Government consider to post a lady medical officer there?

SRI SUBHASH ASTHURE.—The present pattern is like this All taluk headquarters are having a post of lady doctor and every primary health centre is also having one post of a lady doctor. No doubt, Shahabad is a big industrial place with a population of 15,000 to 20,000 people but this hospital does not come under the category of a taluk headquarter hospital or of a primary health centre But considering the situation population and all that, we will consider the question of posting a lady medical doctor there.

MADAM SPEAKER.—Now, Questions are over,